ಸಭಾಂಗಣವನ್ನು ಸರ್ಕಾರ ಪ್ರಾಚೀನ ವಸ್ತುಸಂಗ್ರಹಾಲಯವನ್ನಾಗಿಸಿದೆ. ಬ್ರಹ್ಮಗಿರಿ ಉತ್ಖನನದಲ್ಲಿ ಸಿಕ್ಕ ವಸ್ತುಗಳು, ಪ್ರಾಚೀನ ವಿಗ್ರಹಗಳು, ವರ್ಣಚಿತ್ರಗಳು, ಆಯುಧಗಳು ಇಲ್ಲಿವೆ. ಸುತ್ತಲೂ ಸುಂದರ ಉದ್ಯಾನವನ, ಕೋರ್ಟು, ಸರಕಾರಿ ಕಛೇರಿಗಳು, ಆಸ್ಪತ್ರೆ "ಪುಢಾರಿ" ದೈನಿಕ ಕಾರ್ಯಾಲಯ ಇತ್ಯಾದಿಗಳೂ ಇದ್ದು, ಒಂದು ದೊಡ್ಡ ಚಿಲುಮೆ, ಮಹಾದೇವನ ಮಂದಿರವೂ ಇವೆ.

**ಗಣಪತಿಗಳು :** ಹದಿನೆಂಟನೆಯ ಶತಮಾನದಲ್ಲಿ ಮಹಾಲಕ್ಷ್ಮಿಯನ್ನು ಪುನರ್ ಪ್ರತಿಷ್ಠಾಪಿಸುವಾಗ ಗರುಡಮಂಟಪದಲ್ಲಿ ಸ್ಥಾಪಿಸಿದ ಗಣಪತಿಯ ತಲೆಯ ಮೇಲೆ ನೆರಳಾಗಿ ಸರ್ಪವಿದೆ, ಎರಡು ಬದಿಯೂ ಇಲಿಗಳಿವೆ. ಊರಿನ ದಕ್ಷಿಣದ ಕೊನೆಯಲ್ಲಿ ಜೋಷಿ ವಾಡೆಯಲ್ಲಿ ಕನಸಿನ ಪ್ರಕಾರ ಬಾವಿಯಲ್ಲಿ ಸಿಕ್ಕಿದ ಸ್ವಯಂಭು ಗಣಪತಿಮಂದಿರವಿದೆ. ಮಧ್ಯೆ ಕಂಬವಿಲ್ಲದೆ ಕಟ್ಟಿದ ಗುಡಿ ಇದು. ಬಾಳಿಂಗೆ ರೋಡಿನ ಸಿದ್ಧ (ಗಣಪತಿ) ಬಟುಕೇಶ್ವರ (ಭೈರವ) ಗುಡಿ ಎಲ್ಲಕ್ಕಿಂತ ಪುರಾತನವಾದುದು. ಮಹಾಕಾಲೀ ಮಂದಿರದ ಬಳಿ ಗೋಡೆಯಲ್ಲಿ ಎಡಗೈಯಲ್ಲಿ ಲೇಖನಿ ಹಿಡಿದು ನಿಂತ ಸಾಕ್ಷಿ ವಿನಾಯಕನಿದ್ದಾನೆ. ಕೊಲ್ಹಾಪುರದ ಪೂರ್ವದಲ್ಲಿ ಮರಳುಗಲ್ಲಿನಲ್ಲಿ ಕೆತ್ತಿದ ಸಿದ್ಧಿವಿನಾಯಕ, ದಕ್ಷಿಣದ ಟಿಂಬರ್ ಮಾರ್ಕೆಲ್ ಕಾಲೋನಿಯಲ್ಲಿ ನೆಲ ಅಗೆಯುವಾಗ ಗೋಕುಲಾಷ್ಟಮಿಯಂದು ಸಿಕ್ಕ ಅಷ್ಟಸಿದ್ಧಿ ವಿನಾಯಕ, ಮಹಾದ್ವಾರದ ಬಳಿಯ ಋದ್ಧಿ ಸಿದ್ಧಿಯರ ಜತೆಗಿರುವ, ಲಿಂಗವನ್ನು ತಲೆಯಮೇಲೆ ಧರಿಸಿರುವ ಸಿದ್ಧಿವಿನಾಯಕ —ಇನ್ನಿತರ ಪ್ರಸಿದ್ಧ ಗಣಪತಿಗಳು.

**ಕಾನೇರಿ :** ಐನೂರು ವರ್ಷಗಳ ಕೆಳಗೆ ಲಿಂಗಾಯತ ಗುರುಗಳಾದ ಕಾಡಸಿದ್ಧೇಶ್ವರರು ಬೆಟ್ಟದ ಮೇಲೆ ಈ ಶಿವಲಿಂಗವನ್ನು ಸ್ಥಾಪಿಸಿದರು. ನೂರಿಪ್ಪತ್ತೈದು ಅಡಿ ಆಳದ ಬಾವಿ ಇಲ್ಲಿದೆ. ಶಿವಾಜಿ, ಸಂಭಾಜಿ ಮಹಾರಾಜರು ದೇವಸ್ಥಾನಕ್ಕೆ ಬರುತ್ತಿದ್ದು, ದೇಣಿಗೆ ನೀಡಿದ್ದಾರೆ. ದೊಡ್ಡ ನಂದಿ ವಿಗ್ರಹ ಮಂಟಪವೊಂದರಲ್ಲಿದೆ. ಕರ್ನಾಟಕದ ಭಕ್ತರು ಹೆಚ್ಚು. ಕೊಲ್ಹಾಪುರದಿಂದ ಒಂದು ಮೈಲು ದೂರದಲ್ಲಿದೆ. ಮಿರಜಿನಲ್ಲಿಯಂತೆ ಇಲ್ಲೂ ಶಿವಭಕ್ತ ಮುಸ್ಲಿಂಸಂತ ಮಿರಾಸಾಹೇಬನ ಗೋರಿ ಇದೆ. ಇದಕ್ಕೂ ಪೂಜೆ ಸಲ್ಲುತ್ತದೆ.

ಇದಲ್ಲದೆ ಕುಸ್ತಿಪಂದ್ಯಗಳು ನಡೆಯುವ ರಾಜರ್ಷಿ ಸಾಹು ಖಾಸಬಾಗ್ ಮೈದಾನ; ವಾಟೆಗಾಂವ್‌ನಲ್ಲಿನ ವಟೇಶ್ವರ ದೇವಸ್ಥಾನ; ಚಲನಚಿತ್ರ ನಟ ಚಂದ್ರಕಾಂತ ಮಂಢಾರೆಯ ಚಿತ್ರಕಲಾ ಮ್ಯೂಸಿಯಂ; ಹೆಸರಾಂತ ಶಿವಾಜಿ ಯೂನಿವರ್ಸಿಟಿ; ಶಿವಾಜಿಯ ವಂಶಸ್ಥರ ಐತಿಹಾಸಿಕ ವಸ್ತುಗಳು, ಕತ್ತಿಗಳು, ರಜತ ಸಿಂಹಾಸನ, ಸಾಹು ಮಹಾರಾಜ ಕೊಂದ ಕಾಡುಪ್ರಾಣಿಗಳು, ಪತ್ರಗಳು, ಕಾಣಿಕೆಗಳು ಇತ್ಯಾದಿಗಳನ್ನು ಪ್ರದರ್ಶಿಸಿದ ಛತ್ರಪತಿ ಶಾಹಜಿ ಮ್ಯೂಸಿಯಂ; ಅನೇಕ ವನ್ಯಜೀವಿಗಳು ಮತ್ತು ಹೆಸರಾಂತ 'ಗಾವಾ' ಕಾಡೆಮ್ಮೆಗಳನ್ನು ಹೊಂದಿರುವ ದಾಜೀಪುರ ಅಭಯಾರಣ್ಯ ಇವುಗಳನ್ನೂ ನೋಡಲೇಬೇಕು. ✻

# ಪ್ರಹಸನ ಪ್ರಸಂಗ

ಜಾತಿಗೆ (ಕು)ಖ್ಯಾತವಾದ ಭಾರತವು ಆಗಲೇ ಜನಭಾರದಿಂದ ತತ್ತರಿಸುತ್ತಿದೆ (ಭಾರ–ತ). ಅದರೊಂದಿಗೆ ಜಾತಿಗೊಂದಲದ ಭಾರವೂ ಸೇರಿಕೊಂಡಿದೆ. ಭಾರತ ಎರಡು ಜಾತಿಗಳಿಂದ ಬಳಲುತ್ತಿದೆ: 'ಜ'ಅತಿಯಾಗಿರುವುದೊಂದು, ಜಾತಿಯ ಅತಿ ಮತ್ತೊಂದು.

ಒಂದು ಭೂತವು ಜಗತ್ತನ್ನು ಆಳಬೇಕೆಂದು ಬಯಸಿ ದೇವರ ಹತ್ತಿರ ಹೋಗಿ ತನ್ನ ಬಯಕೆಯನ್ನು ಈಡೇರಿಸಿಕೊಳ್ಳಲು ಅವಕಾಶ ಮಾಡಿಕೊಡಬೇಕೆಂದು ಅವನನ್ನು ಪ್ರಾರ್ಥಿಸಿತು.

**ದೇವರು:** ನೀನು ಜಗತ್ತನ್ನು ಆಳಬಹುದು. ಆದರೆ ಅದಕ್ಕೆ ಮೂರು ಷರತ್ತುಗಳಿವೆ.

**ಭೂತ:** ಯಾವುವು ಮೂರು ಷರತ್ತುಗಳು? ಯಾವ ಷರತ್ತಿಗೂ ನಾನು ಸಿದ್ಧ.

**ದೇವರು:** ಮೊದಲನೆಯದಾಗಿ ಪ್ರಪಂಚದಲ್ಲಿ ಎಷ್ಟು ಮರಳು ಕಣಗಳಿವೆ ಎಂದು ಹೇಳಬೇಕು.

ಭೂತವು ಕೂಡಲೇ ಹೋಗಿ ಒಂದು ವಾರದಲ್ಲಿ ಒಟ್ಟು ಮರಳು ಕಣಗಳ ಸಂಖ್ಯೆಯನ್ನು ಎಣಿಸಿಕೊಂಡು ಬಂದು ಹೇಳಿತು.

**ದೇವರು:** ವಿಶ್ವದಲ್ಲಿ ಎಷ್ಟು ನಕ್ಷತ್ರಗಳಿವೆ?

ಭೂತವು ಒಂದು ತಿಂಗಳ ಅವಧಿಯಲ್ಲಿ ಎಣಿಸಿ ಬಂದು ಇಂತಿಷ್ಟೇ ನಕ್ಷತ್ರಗಳಿವೆ ಎಂದು ಹೇಳಿತು.

**ದೇವರು:** ಭಾರತದಲ್ಲಿ ಎಷ್ಟು ಜಾತಿಗಳಿವೆ ಎಂದು ಹೇಳಬಲ್ಲೆಯಾ?

**ಭೂತ ಕೂಡಲೇ ಕಣ್ಮರೆಯಾಯಿತು, ಮತ್ತೆ ಹಿಂದಿರುಗಲೇ ಇಲ್ಲ.**

* * *

**ನಾ**ವು ಮಾಡುವ ತಪ್ಪುಗಳು ನಮಗೆ ಅಷ್ಟು ದೊಡ್ಡದಾಗಿ ಕಾಣಿಸುವುದಿಲ್ಲ. ಅದೇ ತಪ್ಪುಗಳು ಇತರರಲ್ಲಿ ಕಂಡರೆ ಅವು ಘೋರ ಅಪರಾಧಗಳಾಗಿ ಕಾಣುತ್ತವೆ. ನಮ್ಮ ತಪ್ಪುಗಳನ್ನು ಇತರರಿಗೆ ಹೇಳಬೇಕಾದ ಸಂದರ್ಭದಲ್ಲಿ ಅವು ತಪ್ಪುಗಳೇ ಅಲ್ಲವೇನೋ ಎಂಬ ರೀತಿಯಲ್ಲಿ ಹೇಳುತ್ತೇವೆ.

ಹುಡುಗನೊಬ್ಬನು ಕ್ರೈಸ್ತಪಾದ್ರಿಯ ಮುಂದೆ ಪಾಪನಿವೇದನೆಗೆ ಹೋಗುತ್ತಾನೆ. "ಫಾದರ್, ನಾನು ನೆಲಗಡಲೆಯನ್ನು ನದಿಗೆ ಎಸೆದೆ"

ಪಾದ್ರಿಯು ಇದರಲ್ಲೇನೂ ಅಂತಹ ಅಪರಾಧವನ್ನು ಕಾಣದೆ ಏನೂ ಪ್ರಾಯಶ್ಚಿತ್ತ ವಿಧಿಸದೆ ಕಳಿಸಿಬಿಟ್ಟನು. ಎರಡನೆಯ ಹುಡುಗ ಬಂದನು. ಅವನೂ, "ಫಾದರ್, ನಾನು ನೆಲಗಡಲೆಯನ್ನು ನದಿಗೆ ಎಸೆದೆ," ಎಂದನು. ಪಾದ್ರಿಯು ಅವನನ್ನೂ ಹಾಗೆಯೇ ಕಳಿಸಿದನು. ಅನಂತರ ಬಂದ ಮೂರನೆಯ ಹುಡುಗನೂ ಅದನ್ನೇ ಹೇಳಿದ. ನಾಲ್ಕನೆಯ ಹುಡುಗ ಬಂದಾಗ ಪಾದ್ರಿಯು "ನೀನೂ ನೆಲಗಡಲೆಯನ್ನು ನದಿಗೆ ಎಸೆದೆಯಲ್ಲವೇ?" ಎಂದು ಕೇಳಿದ. **ನಾಲ್ಕನೆಯ ಹುಡುಗ: "ಇಲ್ಲ, ನಾನೇ ನೆಲಗಡಲೆ."** ✤